ಶ್ರೀ ವಾಟಾಳ್ ನಾಗರಾಜ್ : ಇವತ್ತು 70 ಜನ ಶಾಸಕರು ಬಂಡಾಯ ಎದ್ದಿದ್ದಾರೆ. ಮಂತ್ರಿಗಳು ಕೆಲವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇವತ್ತು ಸರ್ಕಾರ ಇದೆಯೇ ಎಂದು ಕೇಳಬೇಕಾಗಿದೆ.

(ಗೊಂದಲ)

Sri R.V. Deshpande: Majority of the MLA's are boycotting the Session.

ಅಧ್ಯಕ್ಷರು : ಸ್ವಲ್ಪ ಶಾಂತಿಯುತವಾಗಿ ಇರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ನಿಂತಿದ್ದಾರೆ. ಅವರಿಗಾದರೂ ಮರ್ಯಾದೆಯನ್ನು ಕೊಡಿ. ಅವರು ನನ್ನ ಗಮನವನ್ನು ಸೆಳೆಯುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಒಂದು ಪತ್ರವನ್ನು ಕಳುಹಿಸಿದ್ದೇನೆ. ರಾಜ್ಯಸರ್ಕಾರ ಒಂದು ಪ್ರಮುಖವಾದಂಥ ನಿರ್ಣಯವನ್ನು ತೆಗೆದುಕೊಂಡಿಲ್ಲ. ಅದು ಪತ್ರಿಕೆಗಳಲ್ಲೆಲ್ಲಾ ಬಂದಿದೆ. ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಬ್ಬರು ಮಂತ್ರಿಗಳ ವಿರುದ್ಧ ಲೋಕಾಯುಕ್ತ ತನಿಖೆ ಮಾಡಬಹುದು ಎನ್ನತಕ್ಕಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ, ಸ್ವಾಗತಿಸುತ್ತೇನೆ, ಆದರೆ ಇದೇ ಸಮಯದಲ್ಲಿ ಈ ಹಿಂದೆಯೂ ಕೂಡ ಇಂಥ ಪ್ರಕರಣಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ನಮ್ಮ ಲೋಕಾಯುಕ್ತ ತನಿಖೆ ನಿರಾಳವಾಗಿ, ಸರಾಗವಾಗಿ ನಡೆಯಬೇಕು, ಅದಕ್ಕೆ ಯಾವ ಒತ್ತಡಗಳು ಬರಬಾರದು ಎನ್ನುವ ದೃಷ್ಟಿಯಿಂದ ರಾಜೀನಾಮೆಯನ್ನು ಕೊಟ್ಟಂಥ ಪ್ರಸಂಗಗಳು ಇವೆ. ಅದಕ್ಕೆ ಒಂದು ಸಾರಿ ತನಿಖೆಗೆ ಆಜ್ಞೆಯಾದ ಮೇಲೆ ಸರ್ಕಾರವೇ ಒಪ್ಪಿಕೊಂಡ ಮೇಲೆ ಆ ಮಂತ್ರಿಗಳು ಮುಂದುವರಿಯುವುದು ಸರಿಯೇ? ಹಾಗೆ ಮುಂದುವರೆದರೆ ಲೋಕಾಯುಕ್ತದಲ್ಲಿ ಯಾವ ತನಿಖೆಯನ್ನು ಮಾಡಬೇಕು ಎನ್ನತಕ್ಕ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ? ಅದು ನಿಷ್ಪಕ್ಷಪಾತವಾದಂತಹ ತನಿಖೆಗೆ ಅವಕಾಶ ಆಗುವುದಿಲ್ಲ ಎನ್ನುವುದು ಜನಜನಿತವಾದಂತಹ ಮಾತು. ಆದ್ದರಿಂದ ಆ ಮಂತ್ರಿ ಏನಾದರೂ ರಾಜೀನಾಮೆ ಕೊಡುತ್ತಾರೆಯೇ? ಕೊಡದೆ ಇದ್ದರೆ I demand the resignation.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ರಾಜೀನಾಮೆ ಕೊಡಬೇಕು, ಕೊಡದೇ ಇದ್ದರೆ ಒತ್ತಾಯ ಮಾಡಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮ ನೆನಪಿಗೆ ಒಂದು ವಿಷಯವನ್ನು ತಂದು ಕೊಡುತ್ತೇವೆ, ಅದೇನೆಂದರೆ ಶ್ರೀಮಾನ್ ಸೋಮಶೇಖರ್ ಎನ್ನುವವರು ಮಂತ್ರಿಯಾಗಿದ್ದರು, ತನಿಖೆಗೆ ವಿಪ್ಪಾಟಾದ ಮೇಲೆ ಒಂದು ನಿಮಿಷ ಕಾಯದೆ ಅವರು ರಾಜೀನಾಮೆ ಕೊಟ್ಟರು. ತನಿಖೆಗೆ ಆಜ್ಞೆಯಾಗಿದೆ ಆದ್ದರಿಂದ ತಮ್ಮಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಬೇಡಿಕೊಳ್ಳುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಬಸವಲಿಂಗಪ್ಪನವರು ರಾಜೀನಾಮೆ ಕೊಟ್ಟಿದ್ದಾರೇನೋ ಅದಕ್ಕೆ ಸದನಕ್ಕೆ ಬಂದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತನಿಖೆಯನ್ನು ಮಾಡಲಿಕ್ಕೆ ಸರ್ಕಾರ ನಿರ್ಣಯ ತೆಗೆದುಕೊಳ್ಳುವಾಗ ಪ್ರೈಮಾಫೇಸಿ ಕೇಸ್ ಇದೆ ಎನ್ನತಕ್ಕದ್ದು ಸರ್ಕಾರ ಬಹುತೇಕ ಒಪ್ಪಿಕೊಂಡಂತೆ ಆಗಿದೆ. ಆದ್ದರಿಂದ ತನಿಖೆ ನಿರ್ಭಂದಿತವಾಗಿ ಆಗಬೇಕೆಂದು ಆ

ಮಂತ್ರಿಗಳು ರಾಜೀನಾಮೆ ಕೊಡಬೇಕು. ಆದ್ದರಿಂದ I demand the resignation, through you, of the Hon. Minister concerned.

(ಗೊಂದಲ)

Sri R.V. Deshpande : He has to resign. When our Government was there, Mr. Someshekhar resigned. I demand the resignation of the Minister.

ಶ್ರೀ ವಾಟಾಳ್ ನಾಗರಾಜ್ : ನಾವು ಯಾರೋ ಒಬ್ಬ ಮಂತ್ರಿಯ ರಾಜೀನಾಮೆ ಕೇಳುತ್ತಿಲ್ಲ. ಸರ್ಕಾರ ಇದೆಯೇ ಎನ್ನತಕ್ಕದ್ದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಇವತ್ತು 100 ಜನ ಶಾಸಕರು ಬಂಡಾಯ ಎದ್ದಿದ್ದಾರೆ. ಮೂರನೆಯ ಪ್ರಶ್ನೆ ಈ ಸದನವನ್ನು ವಿಸರ್ಜನೆ ಮಾಡುವುದಕ್ಕೆ ಒಂದು ಸಂಚು ನಡೆಯುತ್ತಿದೆ ಅದು ಏನಾಗಿದೆ ಎನ್ನತಕ್ಕದ್ದು ನಮಗೆ ಬೇಕು. ಯಾರೋ ಒಬ್ಬರ ಸಚಿವರ ರಾಜೀನಾಮೆ ಕೇಳುತ್ತಿಲ್ಲ. ಸರ್ಕಾರ ಇದೆಯೇ ಎನ್ನತಕ್ಕದ್ದು ನಮ್ಮ ಮೊದಲನೆಯ ಪ್ರಶ್ನೆ. ಪತ್ರಿಕೆಯಲ್ಲಿ ಒಬ್ಬ ಮಂತ್ರಿ ನಾನು ರಾಜೀನಾಮೆ ಕೊಡುವುದಕ್ಕೆ ಸಿದ್ಧ ಎಂದು ಮಲ್ಲಿಕಾರ್ಜುನ ಪ್ರಸನ್ನ ಹೇಳಿದ್ದಾರೆ. ಮತ್ತು ಆರೋಗ್ಯ ಸಚಿವೆಯರು ಆ ಸಭೆಯಲ್ಲಿ ಭಾಗವಹಿಸಿದ್ದರಂತೆ. ಈಗ ಅವರು ಹೊರಗಡೆ ಕುಳಿತಿದ್ದಾರೆ. ಅಂದರೆ ಅವರಲ್ಲಿ ಗೊಂದಲ ಆಗಿದೆ. ಇನ್ನು ಕೆಲವರು ಮಂತ್ರಿಮಂಡಲದಲ್ಲಿ ಹೊಂದಾಣಿಕೆ ಇಲ್ಲದೆ ಬೇರೆ ಕಡೆ ಸಭೆ ಸೇರಿದ್ದಾರೆ.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರು ಸರ್ಕಾರ ಇದೆಯೇ ಅಥವಾ ಇಲ್ಲವೇ ಎಂದು ಕೇಳಿದರು, ನಾನು ವ್ಯವಸ್ಥಿತವಾದಂತಹ ಸರ್ಕಾರ ಇದೆ ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : 70 ಜನ ಶಾಸಕರು ಒಂದೆಡೆ ಸೇರಿರುವುದು ಪತ್ರಿಕೆಯಲ್ಲಿ ಬಂದಿದೆ.

Mr. Speaker : Neither the Government is in coma nor is it is its terminal stage.

(ಗೊಂದಲ)

ಅಧ್ಯಕ್ಷರು: ವ್ಯವಸ್ಥಿತವಾದಂಥ ಸರ್ಕಾರ ಅಂತ ಅಂದರೆ ಮುಖ್ಯಮಂತ್ರಿ ಇರಬೇಕು, ಮಂತ್ರಿಮಂಡಲ ಇರಬೇಕು, ಶಾಸನಸಭೆ ಇರಬೇಕು, ವಿರೋಧ ಪಕ್ಷ ಇರಬೇಕು, ಎಲ್ಲಾ ಇದೆ ಇನ್ನೇನು ಬೇಕು?

ಶ್ರೀ ವಾಟಾಳ್ ನಾಗರಾಜ್: ಹೊರಗಡೆ ಕಾಂಗ್ರೆಸ್ ಬೂದಿ ಮುಚ್ಚಿದ ಕೆಂಡದಂತಿದೆ.

(ಗೊಂದಲ)

ಅಧ್ಯಕ್ಷರು: ವಾಟಾಳ್ ನಾಗರಾಜ್, ನಿಮಗೆ ಏನು ತೊಂದರೆ ಆಗಿದೆ ಅಷ್ಟು ನನಗೆ ಹೇಳಿ.

ಶ್ರೀ ವಾಟಾಳ್ ನಾಗರಾಜ್: ನನ್ನ ತೊಂದರೆ ಪ್ರಶ್ನೆ ತಮಗೆ ಹೇಳುತ್ತಿರುವುದು ಇಷ್ಟೆ. ಇವತ್ತು ಬೆಳಿಗ್ಗೆ ನಾನು ಪತ್ರಿಕೆಯನ್ನು ಓದಿದ ತಕ್ಷಣ ಈ ರಾಜ್ಯದಲ್ಲಿ ಒಂದು ಸುಭದ್ರವಾದಂತಹ ಆಡಳಿತ ಬೇಕೆನ್ನುವುದನ್ನು ನಾವೆಲ್ಲ ನಿರೀಕ್ಷೆ ಮಾಡಿರತಕ್ಕದ್ದು.

12.45ಪಿ.ಎಂ.

ಈ ರಾಜ್ಯದಲ್ಲಿ ಒಂದು ಸುಭದ್ರವಾದ ಆಡಳಿತ ಬೇಕು ಎಂದು ನಾವೆಲ್ಲ ನಿರೀಕ್ಷೆ ಮಾಡಿರುವಂಥದ್ದು.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮಂತ್ರಿ) : ತಾವು ಪತ್ರಿಕೆ ಓದಿರುವುದು ಇವತ್ತೇ ಪ್ರಥಮ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ದಿನಕ್ಕೆ ಅನೇಕ ಸಲ ಪತ್ರಿಕೆಗಳನ್ನು ಓದುತ್ತೇನೆ. ಪ್ರತಿ ದಿನ ಪತ್ರಿಕೆ ಓದುತ್ತೇನೆ. ಸುಮಾರು 80 ಜನ ಶಾಸಕರು ಬಂಡಾಯ ಎದ್ದಿದ್ದಾರೆ ಎಂದು ಎಲ್ಲಾ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಬಂದಿರುವುದು ಇವತ್ತಿನ ವಿಶೇಷವಾದ ವರದಿ.

(ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಪತ್ರಿಕೆಗಳನ್ನು ನೀವು ನೋಡಿ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾಗೋಡು ತಿಮ್ಮಪ್ಪನವರೆ, ಈ ವಿಚಾರ ಪ್ರಮುಖ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿದೆ. ನೀವು ಓದುವಂಥ ಪತ್ರಿಕೆ, ನಾವು ಓದುವಂಥ ಪತ್ರಿಕೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಇಸಾಮಿಯವರು ಏನೋ ಹೇಳಬೇಕೆಂದಿದ್ದಾರೆ.

ಶ್ರೀ ಎಸ್. ಇಸಾಮಿಯ : ನಿನ್ನೆ ಪತ್ರಿಕೆಯಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಕಾಂಗ್ರೆಸ್ ಪಕ್ಷ ಸೇರಿದ್ದಾರೆಂದು ಬಂದಿದೆ. ಇದು ಹೌದೆ ಎಂದು ಕೇಳುತ್ತೇನೆ?

(ಗೊಂದಲ)

ಅಧ್ಯಕ್ಷರು : ಶ್ರೀ ಸಿಂಧ್ಯರವರು ಮಾತನಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ತಾವು ಈ ವಿಚಾರವನ್ನು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಇತರೆ ಸದಸ್ಯರು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ನಿಮಗೆ ಏನು ತೊಂದರೆ ಎಂದು ಪ್ರಶ್ನೆ ಕೇಳಿದ್ದೀರಿ. ಅದರ ಜೊತೆಗೆ ಸರ್ಕಾರ ಇದೆ, ವಿರೋಧಪಕ್ಷದ ನಾಯಕರು ಇದ್ದಾರೆ, ಸ್ಪೀಕರ್ ನಾನೂ ಇದ್ದೇನೆ. ಆದ್ದರಿಂದ, ಸರ್ಕಾರ ಇಲ್ಲ ಎನ್ನುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ಹೇಳಿದ್ದೀರಿ. ತಮಗೆ ಏನು ತೊಂದರೆ ಎಂದು ಕೇಳಿದ್ದರ ಬಗ್ಗೆ, ತಮ್ಮಲ್ಲಿ ಹಾಗು ಸರ್ಕಾರದಲ್ಲಿ ಈ ರೀತಿ ವಿನಂತಿ ಮಾಡಿಕೊಳ್ಳಬಯಸುತ್ತೇನೆ. ರಾಷ್ಟ್ರದ ರಾಜಕಾರಣದ ಹಿನ್ನೆಲೆಯಲ್ಲಿ ಕಳೆದ ನಾಲ್ಕೈದು ದಿನಗಳಿಂದ ನಮ್ಮ ರಾಜ್ಯದ ಪ್ರಮುಖವಾದ, ಜವಾಬ್ದಾರಿಯುತವಾದ ಪತ್ರಿಕೆಗಳಲ್ಲಿ ಅನೇಕ ರೀತಿಯ ವರದಿಗಳು ಬರುತ್ತಿದೆ. ಈ ವರದಿಗಳು ಬಂದಂಥ ಸಂದರ್ಭದಲ್ಲಿ....Please beer with me, I have not told anything.

Sri Azeez Sait: Healthy intervention.

Sri P.G.R. Sindhya: Thank you.

ಆದ್ದರಿಂದ ನಾನು ಕೇಳುವುದೇನೆಂದರೆ, ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ನಮ್ಮ ಸರ್ಕಾರದ ಆಡಳಿತ ಯಂತ್ರ ದುರುಪಯೋಗ ಮಾಡಿಕೊಳ್ಳುತ್ತಿದೆ, ಕೆಲಸ ಸ್ಥಗಿತವಾಗುತ್ತಿದೆ. ಇವತ್ತು ರಾಜ್ಯಗಳಲ್ಲಿ ನಾವು ಹಿಂದೆಂದೂ ನೋಡದೇ ಇರುವಂಥ ಬರಗಾಲ ಪರಿಸ್ಥಿತಿ ಇದೆ, ಕುಡಿಯುವ ನೀರು ಸಿಗುತ್ತಿಲ್ಲ, ಎಲೆಕ್ಟ್ರಿಸಿಟಿ ಸಿಗುತ್ತಿಲ್ಲ, ರೈತರುಗಳಿಗೆ ಬೆಳೆಗಳು ಆಗಿಲ್ಲ. ಆಡಳಿತ ಯಂತ್ರ ಯಾವ ರೀತಿ ಕೆಲಸ ಮಾಡಬೇಕೋ ಆ ರೀತಿ ಕೆಲಸ ಮಾಡುತ್ತಿಲ್ಲ. ಅವರುಗಳು ರಾಜಕೀಯ ಬೆಳವಣಿಗೆ ಏನು

ಆಗಬಹುದು ಎಂದು ಕಾದು ನೋಡುತ್ತಿದ್ದಾರೆ, ಇದರ ಜೊತೆಗೆ, ಪಶ್ಚಿಮಬಂಗಾಳ ಹಾಗು ಕೇರಳಗಳಲ್ಲಿ ಸರ್ಕಾರ ಬಂದು ಒಂದು ವರ್ಷವಾಗಿದೆ, ಈಗ ಅಲ್ಲಿ ಮರು ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ...

ಅಧ್ಯಕ್ಷರು : ಒಂದು ವರ್ಷವೆ ಅಲ್ಲಿ ಆಗಿರುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ರೀತಿಯ ಸಂದರ್ಭ ಇರುವುದರಿಂದ, ನಾವು ಏನನ್ನು ಅಪೇಕ್ಷೆ ಮಾಡುತ್ತೇವೆಂದರೆ, ಸರ್ಕಾರದ ಸಭಾ ನಾಯಕರಾಗಿರುವಂಥವರು ಇದಕ್ಕೆ ಒಂದು ಫುಲ್‌ಸ್ಟಾಪ್ ಹಾಕಬೇಕು, ಪೂರ್ಣ ವಿರಾಮ ಹಾಕಬೇಕು. ಯಾವುದೇ ಕಾರಣದಿಂದಲೂ ವಿಧಾನಸಭೆಯನ್ನು ವಿಸರ್ಜನೆ ಮಾಡುವುದಿಲ್ಲವೆಂಬ ಒಂದು ಹೇಳಿಕೆಯನ್ನು ಸರ್ಕಾರ ಕೊಡಬೇಕಾಗಿದೆ. ಈ ರೀತಿ ಮಾಡುವುದರಿಂದ, ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿದೆ. ಎಂದು ವೇದ್ಯವಾಗುತ್ತದೆ. ಆದುದರಿಂದ ನಾವು ಈ ಸರ್ಕಾರದಿಂದ ಅಪೇಕ್ಷೆ ಮಾಡುವುದು ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಹೇಳಿಕೆ ಕೊಟ್ಟು ಈ ವಿಚಾರಕ್ಕೆ ಪೂರ್ಣ ವಿರಾಮವನ್ನು ಹಾಕಬೇಕು. ಲೋಕಸಭೆಯ ಚುನಾವಣೆಗೆ ಕಾಂಗ್ರೆಸ್‌ನವರು 28 ಕ್ಷೇತ್ರಗಳಿಗೂ ನಿಲ್ಲುತ್ತಾರೆ. ಅವರು ಗೆಲ್ಲಬೇಕಾದರೆ, ವಿಧಾನಸಭೆಯ ಮಂತ್ರಿಮಂಡಲವಾಗಲೀ, ವಿಧಾನ ಸಭೆಯ ಶಾಸಕರುಗಳಾಗಲೀ ಕೆಲಸ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ವಿಧಾನಸಭೆಯನ್ನು ವಿಸರ್ಜನೆ ಮಾಡುತ್ತಾರೆಂಬುದನ್ನು ಬಹಳ ಉನ್ನತ ಮಟ್ಟದ ಅಧಿಕಾರಿಗಳು ಮಾತನಾಡಿಕೊಳ್ಳುತ್ತಿದ್ದಾರೆ. ಯಾರೋ ಬೀದಿಯಲ್ಲಿ ಹೋಗುವವರು ಇದನ್ನು ಮಾತನಾಡಿದ್ದರೆ ನಾವು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿರಲಿಲ್ಲ. ಇದನ್ನು ರಾಜಕಾರಣಕ್ಕಾಗಿ ಕೇಳುತ್ತಿಲ್ಲ, ಸರ್ಕಾರದ ಆಡಳಿತ ಹಿತದೃಷ್ಟಿಯಿಂದ ಕೇಳುತ್ತಿದ್ದೇನೆ. ಆದುದರಿಂದ, ಇದರ ಬಗ್ಗೆ ಸರ್ಕಾರದ ತೀರ್ಮಾನವೇನು ಎಂಬುದನ್ನು ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜರವರು ಹಾಗೂ ನಮ್ಮ ವಿರೋಧಪಕ್ಷದ ಉಪನಾಯಕರಾದಂಥ ಶ್ರೀಮಾನ್ ಸಿಂಧ್ಯರವರು ಬಹಳ ವ್ಯಾಕುಲತೆಯಿಂದ ಮಾತನಾಡುತ್ತಿದ್ದಾರೆ, ಅವರಿಗೆ ವಿಶೇಷವಾಗಿ ನಮ್ಮ ಪಕ್ಷದ ಬಗ್ಗೆ ಇತ್ತೀಚೆಗೆ ಏಕೆ ಈ ವ್ಯಾಕುಲತೆ ಪ್ರಾರಂಭವಾಗಿದೆಯೋ ಗೊತ್ತಿಲ್ಲ. ಇದರಿಂದ ಗಾಬರಿಯೇಕೆ? ನಮ್ಮ ಪಕ್ಷವನ್ನು ಬಲಪಡಿಸುವಂಥ ಆಸಕ್ತಿ ಆ ಕಡೆಯಲ್ಲೂ ಇದೆಯೆಂದು ಆನಂದ ಪಡಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಕಾರ್ಯಕಲಾಪಗಳಿಗೆ ಪ್ರಸ್ತುತವಿಲ್ಲದಿದ್ದರೂ ಕೂಡ.

I am happy all of us should not get disturbed by that.

(Interruptions)

On behalf of the Treasury benches, I thank the hon. members for strengthening the base of our party and strengthening the sentiments to strengthen our party.

Sri R.L. Jalappa: We are not bothered about your party.

Sri M. Veerappa Moily : I am on my legs.

Mr Speaker: Mr. Jalappa, you say that you are not concerned about their party but many of your party members are concerned about what is happening in their party. He pointed out that.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಬ್ರಹ್ಮನನ್ನು ತಯಾರು ಮಾಡಿ ಇಟ್ಟು ಕೊಂಡಿದ್ದೀರಲ್ಲಾ ತೆಗೆದು ತೋರಿಸಿ, ನೋಡೋಣ. ಸನ್ಯಾಸ್ಯ ಹಿರಿಯ ಶಾಸಕರಾದ ಶ್ರೀ ವಾಟಾಳ್ ನಾಗರಾಜ್‌ರವರು ಕಾಂಗ್ರೆಸ್ ಪಕ್ಷ ಸೇರುವ ಬಗ್ಗೆ ನಿನ್ನೆ ಪತ್ರಿಕೆಯಲ್ಲಿ ವರದಿ ಬಂದಿತ್ತು. ಈಗ ಆ ವದಂತಿ ಏನು ಇದೆ, ಅದನ್ನು ದಯಮಾಡಿ ಬಲಪಡಿಸಲಿಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ : ಸಭಾಧ್ಯಕ್ಷರೇ ಇದು ಸತ್ಯಕ್ಕೆ ದೂರವಾದ ಮಾತು. ಈಗ ನಾನು ಸೇರಿದರೆ ಇವರಿಗೆಲ್ಲಾ ಬಹಳ ಭಯ ಬರುತ್ತದೆ. ಅದು ಬೇರೆ ಪ್ರಶ್ನೆ. ಎಷ್ಟು ಜನ ಹೆದರಿದ್ದಾರೆ? ಭಯ ಪಡುತ್ತಿದ್ದಾರೆ ನೋಡಿ. ನಾವು ಒಳಗಡೆ ಹೋದರೆ ಏನಾಗುತ್ತದೆ.? ಎಂಬುದಕ್ಕೆ ದಯವಿಟ್ಟು ಹೆದರಬೇಡಿ ನಾನು ನಿಮ್ಮ ಪಕ್ಷಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಈಗ ತಾವು ಈ ಕಡೆ ಬಂದರೆ ಹೆದರತಕ್ಕಂಥಾದ್ದು ಇದೆ. ಏಕೆಂದರೆ, ನಿಮಗೆ ಸ್ವಲ್ಪ ಬಾಯಿ ಜಾಸ್ತಿ ಇದ್ದು, ನಾಲಿಗೆ ಚುರುಕಾಗಿದೆ. ಆದುದರಿಂದ, ಈ ಕಡೆ ಬಂದರೆ ಹೆದರಲೇಬೇಕಾಗುತ್ತದೆ.

(ಗೊಂದಲ)

ಈಗ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಬಹಳ ಗಂಭೀರವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಬಹುಶಃ ಒಂದು ವಿಚಾರ ನಾನು ತಿಳಿದುಕೊಂಡಿದ್ದೇನೆ. ಏನೆಂದರೆ, ನಾವು ಎಷ್ಟೋ ವರ್ಷಗಳಿಂದ ಪರಸ್ಪರ ನಡೆದುಕೊಂಡವರು. ನನಗೆ ಒಂದು ಭರವಸೆ ಇದೆ. 2 ವರ್ಷಗಳ ಹಿಂದೆ ತಾವು ಅಧಿಕಾರ ಮಾಡಿದವರು, ತಾವು ಅಲ್ಲ, ಇವರೆಲ್ಲಾ ಅಧಿಕಾರ ಮಾಡಿದವರು. ಶ್ರೀ ವಾಟಾಳ್ ನಾಗರಾಜ್‌ರವರಿಗೆ ಅಧಿಕಾರದ ರುಚಿ ಬೇಕಾಗಿಲ್ಲ. ಆದರೆ, ಇವರು ಒಂದೆರಡು ವರ್ಷ ಅಧಿಕಾರ ಮಾಡಿದ ನಂತರ ಆದಷ್ಟು ಜಾಗ್ರತೆ ಪುನಃ ಅಧಿಕಾರವನ್ನು ಬಾಚಿಕೊಳ್ಳುವ ಸನ್ನಾಹದಲ್ಲಿದ್ದಾರೆಂಬ ಅಭಿಪ್ರಾಯದಿಂದ ಹೇಳುತ್ತಿದ್ದೇನೆ, ನಾನು ನಂಬಿಕೊಳ್ಳಲಿಲ್ಲ. ಬಹುಶಃ ಆ ಅಭಿಪ್ರಾಯ ಇರಲಿಕ್ಕಿಲ್ಲ. ತಾವು ಸ್ವಇಚ್ಛೆಯಿಂದ ಈ ವಿಚಾರವನ್ನು ವ್ಯಕ್ತಪಡಿಸಿದ್ದೀರಿ. ಆದರೆ, ಒಂದು ವಿಚಾರ, ವೆಸ್ಟ್ ಬೆಂಗಾಲ್‌ನಲ್ಲಾಗಲೀ, ಕೇರಳದಲ್ಲಾಗಲೀ, ಅಲ್ಲಿ ಆಡಳಿತ ನಡೆಸುತ್ತಿರತಕ್ಕಂಥ ಏನು ಪಕ್ಷಗಳಿವೆ? ಅಥವಾ ಸರ್ಕಾರ ಇದೆ, ಅಲ್ಲಿರತಕ್ಕಂಥ ಅಭದ್ರತೆ, ಅಪವಿತ್ರದೆ ಭಾವನೆಯಿಂದ ಪುನಃ ಚುನಾವಣೆಗೆ ಹೋಗೋಣವೆಂಬ ಭಾವನೆಯನ್ನು ಮೂಡಿಸಿಕೊಳ್ಳಬೇಡಿ, ಆ ತರಹದ ಭಾವನೆ ನಮ್ಮಲ್ಲಿ ಇಲ್ಲ.

(ಗೊಂದಲ)

We are strong. We have no reason to go to polls. Mandate is with us. We are going to discharge that mandate fully.

ಆದುದುರಿಂದ, ತಾವು ರಾತ್ರಿ-ಹಗಲು ನಿದ್ದೆಯನ್ನು ಬಿಟ್ಟು ನಮ್ಮ ಪಕ್ಷದ ಬಗ್ಗೆ ಕಳವಳ ಗೊಂಡಿದ್ದೀರಿ. ನಾವೆಲ್ಲಾ ಬಹಳ ಕ್ಷೇಮವಾಗಿದ್ದೇವೆ. ನಮ್ಮ ಪಕ್ಷವನ್ನು ಯಾವ ರೀತಿ ಬಲಗೊಳಿಸಬೇಕು? ಎಂದು ನಮ್ಮ ಪಕ್ಷದ ಎಲ್ಲಾ ಶಾಸಕರು ರಾತ್ರಿಯೆಲ್ಲಾ ಚಿಂತನೆ ನಡೆಸುತ್ತಿದ್ದಾರೆ.

(ಗೊಂದಲ)

ನಾವು ಕ್ಷೇಮವಾಗಿದ್ದರೆ, ತಾವು ತಮ್ಮ ಸ್ಥಾನದಲ್ಲಿ ಉಳಿದು ಕ್ಷೇಮವಾಗಿರುತ್ತೀರಿ. ನಾವು ಕ್ಷೇಮವಾಗಿಲ್ಲದಿದ್ದರೆ, ನೀವು ನಿಮ್ಮ ಸ್ಥಾನದಲ್ಲಿ ಕ್ಷೇಮವಾಗಿ ಉಳಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ನಾವು-ನೀವು ಕ್ಷೇಮವಾಗಿರೋಣ. ಮತ್ತೆ ಬರಗಾಲದ ಬಗ್ಗೆ ಕುಡಿಯುವ ನೀರಿನ ಬಗ್ಗೆ ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ನಮಗೆ ವಿಸರ್ಜನೆ ಮಾಡತಕ್ಕಂಥ ಆಲೋಚನೆ ಇಲ್ಲ. ನಮ್ಮಲ್ಲಿ ಅಭದ್ರತೆ, ಅಪವಿತ್ರತೆ

ಏನೂ ಕೂಡಾ ಇಲ್ಲ. ತಾವು ನಮ್ಮ ಬಗ್ಗೆ ಇದುವರೆವಿಗೆ ಏನು ವ್ಯಾಕುಲತೆ, ಕಳವಳ ತೋರಿಸಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ, ಇದರಿಂದ ಏನಾದರೂ ರಾಜಕೀಯದ ಒಂದು ವಿಷ ಬೀಜ ಬಿತ್ತುವಂಥ ಆಸೆ ತಮ್ಮಲ್ಲಿದ್ದರೆ, ಅದನ್ನು ಇವ್ಹೊತ್ತು ರಿಮೂವ್ ಮಾಡಿ. ಅದರ ಪರಿಣಾಮ ನಿಮ್ಮೊಳಗೆ ಆಗುತ್ತದೆ. ಅದು ಅಂಕುರವಾಗಲಿಕ್ಕೆ ಯಾವ ಕಾರಣವೂ ಇಲ್ಲವೆಂದು ತಮಗೆ ತಿಳಿಸುತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಅಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರ ಬಗ್ಗೆ ಲೋಕಾಯುಕ್ತರು ತನಿಖೆ ಮಾಡಲು ಒಪ್ಪಿದಂತಹ ವಿಚಾರದಲ್ಲಿ ಮಾನ್ಯ ಬಸವಲಿಂಗಪ್ಪನವರು (ಗ್ರಾಮೀಣ ಅಭಿವೃದ್ಧಿ ಸಚಿವರು) ರಾಜೀನಾಮೆ ಕೊಡಬೇಕು ಎನ್ನತಕ್ಕಂತಹ ವಿಚಾರ ಇಲ್ಲಿ ಚರ್ಚೆಗೆ ಬಂದಿದೆ, ಪ್ರಶ್ನೆ ಇರುವುದಿಷ್ಟೆ, ಅವರ ಬಗ್ಗೆ ಆಪಾದನೆಗಳನ್ನು ಮಾಡಿದ್ದಾರೆ ಅದರಲ್ಲಿ ಎಷ್ಟು ಪ್ರೈಮಾಫೇಸಿ ಸತ್ಯವಿದೆಯೋ? ಎಷ್ಟು ಅಸತ್ಯವಿದೆಯೋ? ಅದನ್ನು ನೀವು ಸಹ ಇವತ್ತು ಹೇಳುವುದಕ್ಕಾಗುವುದಿಲ್ಲ, ನಾವು ಕೂಡ ಹೇಳುವುದಕ್ಕಾಗುವುದಿಲ್ಲ. ಪ್ರೈಮಾಫೇಸಿ ಒಂದು ಅಲಿಗೇಷನ್ ಬಂತು ಎಂದು ಅದನ್ನು ಸ್ವೀಕರಿಸಿದಂತಹ ಮುಖ್ಯಮಂತ್ರಿಯವರ ಉದಾತ್ತ ಮನೋವೃತ್ತಿಗೆ, ಮುಖ್ಯಮಂತ್ರಿಗಳ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಟ್ಟಂತಹ ಗ್ರಾಮೀಣಾಭಿವೃದ್ಧಿ ಸಚಿವರಿಗೆ ವಂದನೆಯನ್ನು ಸಲ್ಲಿಸಬೇಕು.

Sri D.B. Chandre Gowda: First thing I did was, I congreatulated the Government. But the concerned Minister at the same time, should follow certain principles. ಸತ್ ಸಂಪ್ರದಾಯಕವಾಗಿ, ನಿರ್ಭಾದಿತವಾದ ಒಂದು ತನಿಖೆ ನಡೆಯುತ್ತಿದೆ ಎನ್ನುವಾಗ ಅದರಲ್ಲಿ ನಮಗೆ ಶಂಕೆಯುಂಟಾಗುತ್ತಿದೆ. ಆದುದರಿಂದ ಮಂತ್ರಿಗಳು ಅದು ಮುಗಿಯುವವರೆಗೂ... he should have resigned.

Sri M. Veerappa Moily: There are no precedents, ಇವ್ಹೊತ್ತು ಸಂಪ್ರದಾಯಗಳ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋದರೆ ನಿಮಗೆ ಸ್ವಲ್ಪ ತೊಂದರೆಯಾಗುತ್ತದೆ, ಆದರೆ ನಾನು ನಿದರ್ಶನಗಳ ಬಗ್ಗೆ ಮಾತ್ರ ಉಲ್ಲೇಖ ಮಾಡುತ್ತೇನೆ. ಯಾಕೆಂದರೆ ಲೋಕಾಯುಕ್ತದ ಬಗ್ಗೆ ಉಲ್ಲೇಖ ಮಾಡುತ್ತೇನೆ. ಲೋಕಾಯುಕ್ತವನ್ನು ತಯಾರು ಮಾಡಿದಂತಹ ಬ್ರಹ್ಮ ನಿಮ್ಮ ರಾಮಕೃಷ್ಣ ಹೆಗಡೆಯವರು, ಯಾವ ರಾಮಕೃಷ್ಣ ಹೆಗಡೆಯವರು ಲೋಕಾಯುಕ್ತವನ್ನು ಸ್ಥಾಪನೆ ಮಾಡಿದರೋ? ಅದರ ಬಗ್ಗೆ ಸಾಕಷ್ಟು ವ್ಯಾಖ್ಯಾನ ಮಾಡಿದ್ದರೋ? ಅವರೇ ಅವರ ಪುತ್ರನ ಹಸ್ತಕ್ಷೇಪದ ಬಗ್ಗೆ ಆಪಾದನೆ ಬಂದಾಗ ತನಿಖೆಗೆ ಆಜ್ಞೆ ಮಾಡಲಿಲ್ಲ, ರಾಜೀನಾಮೆ ಕೊಡಲಿಲ್ಲ.

(ಗೊಂದಲ)

Sri D.B. Chandre Gowda: On an earlier occasion, Youngman from Mandya Mr. Somashekhar had resigned.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದಂತಹ ಕಾಲದಲ್ಲಿ ಲೋಕಾಯುಕ್ತರಿಂದ ಅವರ ಮೇಲೆ ಆಪಾದನೆ ಬಂದಾಗ ಅದನ್ನು ವಿಚಾರಣೆಗೆ ಕೊಡದೆ ಅವರು ರಾಜೀನಾಮೆಯನ್ನು ಅಂದು ಕೊಡಲಿಲ್ಲ. ಎರಡನೆಯದಾಗಿ ಸನ್ಮಾನ್ಯ ದೇವೇಗೌಡರು ಸಚಿವರಾಗಿದ್ದಾಗ ಅವರ ಬಗ್ಗೆ ಲೋಕಾಯುಕ್ತಕ್ಕೆ ಆಪಾದನೆಯ ಪಟ್ಟಿಯನ್ನು ಕೊಟ್ಟಾಗ ಸಚಿವರಾಗಿದ್ದ ಅವರು ರಾಜೀನಾಮೆಯನ್ನು ಕೊಡಬೇಕೆಂದು ಆಗಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಆ ಸಂಪ್ರದಾಯವನ್ನು ಮಾಡಲಿಲ್ಲ ಹಾಗಾದರೆ ಮುಖ್ಯಮಂತ್ರಿಗಳೇ ಮಾಡಲಿಲ್ಲವೆಂದಾಗ ಇನ್ನೂ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸೋಮಶೇಖರ್....

ಶ್ರೀ ಎಂ. ವೀರಪ್ಪಮೊಯಿಲಿ : ಅಂದು ಸೋಮಶೇಖರ್ ಪಾಪ ಮನೆಗೆ ಹೋದರು, ಆದರೆ ದೇವೇಗೌಡರು ಮತ್ತು ರಾಮಕೃಷ್ಣ ಹೆಗಡೆಯವರು ಮನೆಗೆ ಹೋಗಲಿಲ್ಲ. ಯಾರನ್ನಾದರೂ ಆಪಾದನೆ ಮಾಡಿದ ಕೂಡಲೆ ಅವರನ್ನು ಬಲಿಪಶುವನ್ನಾಗಿ ಮಾಡುವ ಪಕ್ಷ ನಮ್ಮ ಪಕ್ಷವಲ್ಲ. He might have been helpless. But powerful people have not resigned.

ಶ್ರೀ ಡಿ.ಬಿ. ಚಂದ್ರೇಗೌಡ : ಆಪಾದನೆಗೂ ವಿಚಾರಣೆಗೂ ವ್ಯತ್ಯಾಸವಿದೆ. ವಿಚಾರಣೆಗೆ ನೀವು ಒಪ್ಪಿಕೊಂಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡತಕ್ಕ ಸಂದರ್ಭದಲ್ಲಿ ನಾನು ಹೇಳಿದ ಎರಡೂ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದರು. ಒಂದು ವಿಚಾರದಲ್ಲಿ ನೀವು ವಿಷ ಬೀಜವನ್ನು ಬಿತ್ತಬೇಡಿ ಎಂದು ಹೇಳಿದ್ದಾರೆ. ನಾವು ಪ್ರಾರಂಭದಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡುವಾಗ, ಇದರಿಂದ ಸರ್ಕಾರದ ಆಡಳಿತದ ಯಂತ್ರ ನಿಷ್ಕ್ರಿಯವಾಗಬಾರದು, ಅದು ಯಾವಾಗಲೂ ಆಲರ್ಟ್ ಆಗಿ ಇರಬೇಕು ಎನ್ನುವ ಉದ್ದೇಶದಿಂದ ಹೇಳಿದಂಥ ಮಾತು. ಆದ್ದರಿಂದ ತಾವು ಹೇಳಿದಂಥ ಮಾತನ್ನು ವಾಪಸ್ಸು ಪಡೆಯಬೇಕು. ಎರಡನೆಯದಾಗಿ ತಾವು ದಯವಿಟ್ಟು ಪಶ್ಚಿಮ ಬಂಗಾಳ ಸರ್ಕಾರದಲ್ಲಿ, ಕೇರಳ ಸರ್ಕಾರದಲ್ಲಿ ಅಭದ್ರತೆ ಇರತಕ್ಕಂಥ ಆಪಾದನೆ ಮಾಡುವುದಕ್ಕೆ ನಿಮಗೆ ಯಾವ ಹಕ್ಕೂ ಇಲ್ಲ. ಅದು ನಿಮಗೆ ಹೇಗೆ ಗೊತ್ತು?

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನಲ್ಲಿ ಇರತಕ್ಕಂತಹ ಈ ಕೆಳಗಿನ ಮನವಿಗಳನ್ನು ಈ ಸದನಕ್ಕೆ ಒಪ್ಪಿಸುತ್ತೇನೆ.

a) sanction of Cottage Hospital to Kudchi Town, Raibag Taluk, Belgaum District.

b) providing funds to purchase two Boats to TMC Kudchi town, Raibag Taluk, Belgaum District.

ಶ್ರೀ ಜಿ.ಎಸ್. ಆಚಾರ್ : ಕುಂದಾಪುರ ತಾಲ್ಲೂಕಿನ ಒಂದು ಕುಗ್ರಾಮದಲ್ಲಿ ಉಪ್ಪು ನೀರಿನಿಂದ ಆದ ತೊಂದರೆಗೆ ತಡೆ ಗೋಡೆ ನಿರ್ಮಿಸಲು ಬಂದ ಗ್ರಾಮಸ್ಥರ ಅರ್ಜಿಗೆ ಮೇಲು ರುಜು ಹಾಕಿ ನಾನು ವಿಧಾನ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಕೆ. ಕುಶಾಲ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಅರ್ಜಿಯನ್ನು ಅರ್ಜಿ ಸಮಿತಿಗೆ ಒಪ್ಪಿಸುತ್ತೇನೆ.

"Providing necessary Civic Amenities to Kengeri Satellite Town, Bangalore District."

ಅಧ್ಯಕ್ಷರು : ಅರ್ಜಿಗಳನ್ನು ಸಭೆಯಲ್ಲಿ ಮಂಡಿಸಲಾಯಿತು.